**2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆ: 87/2024**

**ಪಿ.ಡಬ್ಲುಃ6  ಸಿಡಬ್ಲುಃ 6**

| | | |
|---|---|---|
| ಸಾಕ್ಷಿಯ ಹೆಸರು | : | ಗೋವಿಂದಪ್ಪ |
| ತಂದೆಯ ಹೆಸರು | : | ಈರಣ್ಣ |
| ವಯಸ್ಸು | : | 43 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ಗೋಸಬಾಳ ಗ್ರಾಮ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ 26-11-2025**

**ಮುಖ್ಯ ವಿಚಾರಣೆ ಮಾನ್ಯ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ-**

1) ಚಾಸಾ-1, 4 ಹಾಗು 5 ಇವರ ಪರಿಚಯವಿದೆ. ಹಾಜರಿರುವ 1 ಹಾಗು 4 ನೇ ಪರಿಚಯವಿದೆ. ಸುಮಾರು 6 ವರ್ಷಗಳ ಹಿಂದೆ ಸಂಜೆ 5 ಗಂಟೆಗೆ 1 ರಿಂದ 3 ನೇ ಆರೋಪಿತರು ಚಾಸಾ-1 ಇವರ ಮನೆಗೆ ಬಂದು ಬೈದಾಡಿದ್ದರು. ಆ ಬಗ್ಗೆ ಚಾಸಾ-1, 4 ಹಾಗು 5 ಇವರು ಆರೋಪಿತರ ಮನೆಗೆ ಕೇಳಲು ಹೋಗಿದ್ದರು. ಅದಕ್ಕೆ ನಮ್ಮ ಮನೆಗೆ ಕೇಳಲು ಬಂದಿದ್ದೀರಾ ಎಂದು 3 ನೇ ಆರೋಪಿ ಅವರ ಮೇಲೆ ಖಾರದ ಪುಡಿ ಎರಚಿದ.

2) 1 ನೇ ಆರೋಪಿ ಚಾಸಾ-1, 4 ಹಾಗು 5 ಇವರಿಗೆ ಕಟ್ಟಿಗೆಗಳಿಂದ ತಲೆಗೆ ಹೊಡೆದ. 1 ನೇ ಆರೋಪಿ ಕಟ್ಟಿಗೆಗಳಿಂದ ಚಾಸಾ-1 ಇವರ ತಲೆಗೆ ಮತ್ತು ಎಡಗೈಗೆ ಹೊಡೆದ. 1 ನೇ ಆರೋಪಿ ಕಟ್ಟಿಗೆಗಳಿಂದ ಚಾಸಾ-4 ಇವರ ತಲೆಗೆ ಮತ್ತು ಬಲ ರಟ್ಟೆಗೆ ಹೊಡೆದ. 1 ನೇ ಆರೋಪಿ ಕಟ್ಟಿಗೆಗಳಿಂದ ಚಾಸಾ-5 ಇವರ ಬೆನ್ನಿಗೆ ಹೊಡೆದ. 4 ನೇ ಆರೋಪಿ ಏನು ಮಾಡಲಿಲ್ಲ. ನಾನು, ಚಾಸಾ-7 ರಿಂದ 9 ಕೂಡಿ ಜಗಳ ಬಿಡಿಸಿರುತ್ತೇವೆ. ಚಾಸಾ-1, 4 ಹಾಗು 5 ಸಿರಿಗೇರಿಯ ಪ್ರಾ. ಆರೋಗ್ಯ ಕೇಂದ್ರಕ್ಕೆ ಹೋದರು ಅವರನ್ನು ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಬಳ್ಳಾರಿಯ ವಿಮ್ಸ್ ಆಸ್ಪತ್ರೆಗೆ ಕಳುಹಿಸಿದ್ದರು.

3) 1 ನೇ ಆರೋಪಿ ಹಲ್ಲೆಗೆ ಉಪಯೋಗಿಸಿದ ಕಟ್ಟಿಗೆಗಳನ್ನು ಈಗ ನ್ಯಾಯಾಲಯದಲ್ಲಿ ನೋಡಿ ಗುರುತಿಸಿದ್ದೇನೆ ಅವುಗಳನ್ನು ಈಗಾಗಲೇ ಮುಮಾ-1 ಹಾಗು 2 ಎಂದು ಗುರುತಿಸಲಾಗಿವೆ. ಪ್ರಕರಣದ ಬಗ್ಗೆ ಪೊಲೀಸರು ಹೇಳಿಕೆ ಪಡೆದಿದ್ದಾರೆ.

ಪಾಟೀಸವಾಲು 1 ನೇ ಆರೋಪಿ ಪರವಾಗಿ ಶ್ರೀಮತಿ ಎಚ್.ಆರ್.ಜೆ ಎಲ್.ಎ.ಡಿ.ಸಿ ವಕೀಲರಿಂದಃ

4) 1 ನೇ ಆರೋಪಿತನ ಮಗಳನ್ನು ನನ್ನ ತಮ್ಮ ಮದುವೆಯಾಗಿದ್ದಾನೆ. ಚಾಸಾ-1, 4 ಹಾಗು 5, 7 ರಿಂದ 9 ಇವರು ನನ್ನ ಸಂಬಂಧಿಕರು ಎಂದರೆ ಸರಿ. ಯಾರ ಯಾರ ನಡುವೆ ಯಾವ ದಿವಸ ಜಗಳವಾಯಿತು ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಮೃತ ಬಂಧಮ್ಮ ಇವಳ ಜೂತೆ ಜಗಳವಾದ ಎಷ್ಟು ದಿವಸಗಳ ನಂತರ ಈ ಜಗಳವಾಯಿತು ಎಂಬ ಪ್ರಶ್ನೆಗೆ ಸಾಕ್ಷಿ ಇದೇ ಜಗಳ ಮೊದಲು ಆಗಿರುತ್ತದೆ ಎಂದು ಉತ್ತರಿಸುತ್ತಾರೆ.

5) ಖಾರದಪುಡಿಯನ್ನು ಯಾರು ಯಾರಿಗೆ ಹಾಕಿದರು ಎಂದು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿಯಲ್ಲ. ಕಟ್ಟಿಗೆ ತೆಗೆದುಕೂಂಡು ಹೊಡೆದಿದ್ದನ್ನು ನಾನು ನೋಡಿಲ್ಲ, ನಂತರ ಅಲ್ಲಿಗೆ ಹೋಗಿದ್ದೇನೆ ಎಂದರೆ ಸರಿಯಲ್ಲ. ನಾವು ಜಗಳ ಬಿಡಿಸಲು ಹೋದಾಗ ಸಂಜೆ 5 ಗಂಟೆಯಾಗಿತ್ತು. 1 ನೇ ಆರೋಪಿಯ ಮನೆಯಿಂದ ಬಳ್ಳಾರಿಯ ವಿಮ್ಸ್ ಆಸ್ಪತ್ರೆಗೆ ಬಂದಾಗ ಸಂಜೆ 6 ಗಂಟೆಯಾಗಿತ್ತು. ಚಾಸಾ-1 ಹಾಗು 4 ಇವರ ಮೇಲೆ 1 ನೇ ಆರೋಪಿ ದೂರನ್ನು ನೀಡಿದ್ದ. ಅದಾದ ನಂತರ ಈ ಪ್ರಕರಣ ದೂರನ್ನು ನೀಡಲಾಗಿದೆ ಎಂದರೆ ಅವರು ದೂರನ್ನು ನೀಡಿದ್ದಾರೆ ಇವರು ದೂರನ್ನು ನೀಡಿದ್ದಾರೆ ಎಂದು ಸಾಕ್ಷಿ ಉತ್ತರಿಸುತ್ತಾರೆ.

6) ಪೊಲೀಸರು ನನಗೆ ಏನನ್ನು ಕೇಳಿಲ್ಲ ಮತ್ತು ನಾನು ಅವರಿಗೆ ಏನನ್ನು ಹೇಳಿಲ್ಲ ಎಂದರೆ ಸರಿಯಲ್ಲ. ಮುಮಾ-1 ಹಾಗು 2 ಕಟ್ಟಿಗೆಗಳು ನಮ್ಮ ಮನೆಯಲ್ಲಿದ್ದ ಕಟ್ಟಿಗೆಗಳು ಎಂದರೆ ಸರಿಯಲ್ಲ. ಮುಮಾ-1 ಹಾಗು 2 ರಂತಹ ಕಟ್ಟಿಗೆಗಳು ನಮ್ಮ ಮನೆಯಲ್ಲಿ ಹಾಗು 1 ನೇ ಆರೋಪಿಯ ಮನೆಯಲ್ಲಿಯು ಇರುತ್ತವೆ ಎಂದರೆ ಸರಿ. ಸಾಕ್ಷಿ ಮುಂದುವರೆದು

ಹೇಳುವುದೇನೆಂದರೆ ಮುಮಾ-1 ಹಾಗು 2 ನೇ ಕಟ್ಟಿಗೆಗಳಿಂದ 1 ನೇ ಆರೋಪಿ ಹಲ್ಲೆ ಮಾಡಿರುತ್ತಾನೆ.

7) 2 ನೇ ಆರೋಪಿ ಬಂಧಮ್ಮ ನನಗೆ ಅಕ್ಕನಾಗಬೇಕು. ಬಂಧಮ್ಮ ಇವಳ ಮರಣ ಹೊಂದಿದ ನಂತರ 1 ನೇ ಆರೋಪಿ ಇನ್ನೊಂದು ಮದುವೆಯಾಗಿದ್ದಾನೆ ಎಂದರೆ ಸರಿ. 2 ಮತ್ತು 3 ನೇ ಆರೋಪಿತರು ಮರಣ ಹೊಂದಿರುತ್ತಾರೆ. 1 ನೇ ಆರೋಪಿ ಇನ್ನೊಂದು ಮದುವೆಯಾಗಿದ್ದಾನೆ 3 ನೇ ಆರೋಪಿ ಮರಣ ಹೊಂದಿದ್ದಾನೆ ಆದದರಿಂದ 1 ಮತ್ತು 4 ನೇ ಆರೋಪಿತರ ಮೇಲೆ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

8) ಬಂಧಮ್ಮ ಇವಳ ಕೊಲೆಯಾದ ಬಗ್ಗೆ ಪ್ರಕರಣ ದಾಖಲಾಗಿದ್ದು ಅದರ ವಿರುದ್ಧ ಈ ಪ್ರಕರಣ ದಾಖಲಾಗಿದ್ದು ಇದರಲ್ಲಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಸಾಧಾರಣ ರೂಪದ ಗಾಯವಾಗಿತ್ತು ಎಂದು ಹೇಳಿದ ಬಗ್ಗೆ ಸಾಕ್ಷಿ ಮಾಮೂಲು ಗಾಯವಾಗಿತ್ತು ಎಂದು ಉತ್ತರಿಸುತ್ತಾರೆ. ಎಲ್ಲಾ ಗಲಾಟೆ ಮುಗಿದ ನಂತರ ನಾನು, ಚಾಸಾ-7 ರಿಂದ 9 ಜಗಳ ಬಿಡಿಸಲು ಹೋಗಿದ್ದೆವು ಎಂದರೆ ಸರಿಯಲ್ಲ. ನಾನು ಚಾಸಾ-1 ಹಾಗು 7 ಇವರ ಮಾತು ಕೇಳಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀಸವಾಲು 4 ನೇ ಆರೋಪಿ ಪರವಾಗಿ ಶ್ರೀ ಎಚ್.ವಿ. ವಕೀಲರಿಂದ</u>

ಶ್ರೀ ಎಚ್.ವಿ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರುವಿಚಾರಣೆ ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

C/C.2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.